



**ಅಳಬೇಡ ಕಂದ**

ಅನುವಾದಿತ ಕಾದಂಬರಿ

ಮೂಲ: ಗೂಗಿ ವಾ ಥಿಯಾಂಗೊ

ಕನ್ನಡಕ್ಕೆ: ಸಿ. ನಾಗಣ್ಣ

ಪು: 198 ಬೆಲೆ: 200

ಪ್ರ: ಯುಕ್ತಾ ಪ್ರಕಾಶನ

ನಂ. 2109, ಮಾಧವಾಚಾರ್ ರಸ್ತೆ,

ಕೆ.ಆರ್. ಮೊಹಲ್ಲಾ,

ಮೈಸೂರು – 570 004

**‘ನನ್ನ ಓದು’ ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

ರೈತರ ಜಮೀನನ್ನು ಅದರಲ್ಲೂ ಬಡರೈತರ ಜಮೀನನ್ನು ವ್ಯವಸ್ಥಿತವಾಗಿ ಬಿಳಿಯರು ಕಬಳಿಸಿದ್ದರು. ಕೀನ್ಯಾ ಭೂಮಿ ಮತ್ತು ಸ್ವಾತಂತ್ರ್ಯಕ್ಕಾಗಿ ಸೇನೆ (Kenya land and freedom Army) ಎಂಬುದು ಸ್ವಾತಂತ್ರ್ಯಕ್ಕಾಗಿ ಗೆರಿಲ್ಲಾ ಯುದ್ಧ ನಡೆಸಿದ ಮೌಮೌ ಚಳವಳಿಯ ಸಂಘಟನೆಯ ಹೆಸರು. 1952ರಲ್ಲಿ ಕಿಯಾತಿ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳವಳಿ ತೀವ್ರಗೊಂಡಿತು. ಆಗ ಬ್ರಿಟಿಷ್ ಸರ್ಕಾರ ತುರ್ತು ಪರಿಸ್ಥಿತಿ ಹೇರಿತು.

ಕೀನ್ಯಾದಲ್ಲಿ ಎಲ್ಲಾ ಭೂಮಿಯನ್ನು ಬ್ರಿಟಿಷ್ ಆಸ್ತಿ ಎಂದು ಘೋಷಿಸಲಾಗಿತ್ತು. ಸ್ಥಳೀಯರು ಜಮೀನನ್ನು ಸ್ವಂತವಾಗಿ ಪಡೆಯಲು ಹಕ್ಕಿರಲಿಲ್ಲ. ಅವರು ಅದನ್ನು ಸಾಗುವಳಿಗೆ ಪಡೆಯಬಹುದಾಗಿತ್ತಷ್ಟೆ. ಸ್ಥಳೀಯ ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಮತ್ತು ಅವರ ಕೆಲಸದ ಸ್ಥಿತಿಗತಿಗಳನ್ನು ನಿರ್ಧರಿಸುವುದು ಬಿಳಿಯರಿಗೆ ಮಾತ್ರ ಸೇರಿದ್ದಾಗಿತ್ತು. ಗುಲಾಮಗಿರಿಯನ್ನು ಹೋಲುವ ಬಲವಂತದ ದುಡಿಮೆ ವಸಾಹತು ಆಳ್ವಿಕೆಯ ಅತ್ಯಂತ ಹೇಯವಾದ ಲಕ್ಷಣಗಳಲ್ಲೊಂದಾಗಿತ್ತು. ನಾವು ಸ್ಥಳೀಯ ಜನರನ್ನು ಉಪಯುಕ್ತ ನಾಗರಿಕರನ್ನಾಗಿ ಮಾಡಲು ಉದ್ದೇಶಿಸಿದ್ದೇವೆ. ಆದುದರಿಂದ ನಮಗಾಗಿ ಅವರು ಕೆಲಸ ಮಾಡಬೇಕು. ನಮ್ಮ ಸೇವೆಯನ್ನು ಮಾಡಬೇಕು ಎಂಬುದು ಬಿಳಿಯರ ವಾದವಾಗಿತ್ತು. ಈ ಕಾದಂಬರಿಯಲ್ಲಿ ಬರುವ ನುಗುತೋ ಮತ್ತು ಅವನಂತಹವರು ತಮ್ಮ ಜಮೀನನ್ನೇ ಬಿಳಿಯರಿಗೆ ಬಿಟ್ಟು ಕೊಟ್ಟು ಅವರ ಜಮೀನಿನಲ್ಲಿಯೇ ಕಾರ್ಮಿಕರಾಗಿ ದುಡಿದು ಸೇವೆ ಸಲ್ಲಿಸಬೇಕು. ನುಗುತೊನ ಜಮೀನು ಹೌಲೆಂಡ್ಸ್‌ನ ಬಳಿ ಇದೆ. ಅವನ ಜಮೀನಿನಲ್ಲಿಯೇ ಕಾರ್ಮಿಕನಾಗಿ ದುಡಿಯುತ್ತಿದ್ದಾನೆ. ನುಗುತೊನ ಮಕ್ಕಳಿಗೆ ಇದು ಗೊತ್ತಿದೆ. ಅವನ ಇಬ್ಬರು ಹೆಂಡಿರು ಮಕ್ಕಳೂ ತಮ್ಮ ಜಮೀನು